# ಕೊರೊನಾ ವ್ಯಾಕ್ಸಿನ್ ಬರುತ್ತಿದೆ 'ನೇಸಲ್ ಡ್ರಾಪ್ಸ್'!

**ಕೊರೊನಾ ವೈರಸ್ ನಿರ್ಮೂಲನೆಗೆ ಇಂಜೆಕ್ಷನ್‌ಗಿಂತಲೂ ನೇಸಲ್ ಡ್ರಾಪ್ಸ್ ಹೆಚ್ಚು ಪರಿಣಾಮಕಾರಿ. ಸದ್ಯ ಭಾರತದಲ್ಲಿ ನೇಸಲ್ ಡ್ರಾಪ್ಸ್ ಪ್ರಾಯೋಗಿಕ ಹಂತದಲ್ಲಿದೆ. ಇದು ಯಶ ಗಳಿಸಿದರೆ ನೋವು ರಹಿತ ಚಿಕಿತ್ಸೆ ಲಭ್ಯವಾಗಲಿದೆ.**

**ಉಮಾ ಅನಂತ್**

ವೈದ್ಯಲೋಕ ನಿತ್ಯವೂ ಹೊಸ ಅನ್ವೇಷಣೆಯತ್ತ, ನೂತನ ಆವಿಷ್ಕಾರದತ್ತ ದಾಪುಗಾಲು ಹಾಕುತ್ತಿದೆ. ಈ ಮಾತಿಗೆ ಪುಷ್ಟಿ ನೀಡುವಂತೆ ಇದೀಗ 'ಕೋವಿಡ್ 19' ತಡೆಗೆ ಇಂಜೆಕ್ಷನ್ ರೂಪದ ಲಸಿಕೆಯ ಬದಲಾಗಿ 'ನೇಸಲ್ ಡ್ರಾಪ್ಸ್' ಮೂಲಕ ಹೆಚ್ಚು ಪರಿಣಾಮಕಾರಿಯಾದ ಲಸಿಕೆ ಚಿಕಿತ್ಸೆ ನೀಡುವ ಪ್ರಯತ್ನಗಳು ನಡೆಯುತ್ತಿವೆ.

ಸೂಕ್ಷ್ಮಾಣು ಅಥವಾ ವೈರಾಣುವನ್ನು ಬಳಸಿ ಪ್ರತಿಬಂಧಕ ಉಂಟು ಮಾಡುವಂತೆ ತಯಾರಿಸುವ ಜೈವಿಕ ವಸ್ತುವೇ ಲಸಿಕೆ ಎಂದು ಸ್ಥೂಲವಾಗಿ ಹೇಳಬಹುದು. ವ್ಯಕ್ತಿಯಲ್ಲಿ ನಿರ್ದಿಷ್ಟ ಕಾಯಿಲೆಯ ವಿರುದ್ಧ ಪ್ರತಿರಕ್ಷಣೆಯನ್ನು ನೀಡುವ ಈ ಲಸಿಕೆಯನ್ನು ಚುಚ್ಚುಮದ್ದು ರೂಪದಲ್ಲೇ ನೀಡಬೇಕಿಲ್ಲ. ಮೂಗಿನ ಎರಡೂ ಹೊಳ್ಳೆಗಳೊಳಗೆ ಔಷಧಿಯ ಹನಿಗಳನ್ನು ಚಿಮುಕಿಸುವ ಮೂಲಕವೂ ಪರಿಣಾಮಕಾರಿ ಲಸಿಕೆ ನೀಡಬಹುದು ಎಂಬುದನ್ನು ವೈದ್ಯ ವಿಜ್ಞಾನಿಗಳು ಸ್ಪಷ್ಟಪಡಿಸಿದ್ದಾರೆ. ಇನ್ನು ಸ್ವಲ್ಪಸಮಯದಲ್ಲೇ ಈ ನೇಸಲ್ ಡ್ರಾಪ್ಸ್‌ಗಳು ಲಭ್ಯವಾಗಲಿವೆ.

ನೇಸಲ್ ಡ್ರಾಪ್ಸ್ ಚುಚ್ಚುಮದ್ದಿಗಿಂತಲೂ ಹೆಚ್ಚು ಪರಿಣಾಮಕಾರಿ. ಸೂಜಿ ಚುಚ್ಚಿದರೆ 'ಅಮ್ಮಾ...' ಎಂದು ಅಳುವ ಮಕ್ಕಳಿಗಂತೂ ಇದು ನಿಜಕ್ಕೂ ಸಿಹಿಸುದ್ದಿಯೇ.

ನೇಸಲ್ ಡ್ರಾಪ್ಸ್ ಬಳಕೆ ಸದ್ಯ ನಮ್ಮ ದೇಶದಲ್ಲಿ ಪ್ರಾಯೋಗಿಕ ಹಂತದಲ್ಲಿದ್ದು, 75 ಜನರಿಗೆ ಡ್ರಾಪ್ಸ್ ನೀಡಲು ಕೇಂದ್ರ ಸರ್ಕಾರ ಅನುಮತಿ ನೀಡಿದೆ. ಈಗಾಗಲೇ ಇಲಿಗಳ ಮೇಲೆ ಪ್ರಯೋಗ ನಡೆಸಿದ್ದು, ಡ್ರಾಪ್ಸ್ ನಿರೀಕ್ಷಿತ ಯಶಸ್ಸನ್ನೂ ಕಂಡಿದೆ.

'ಕೊರೊನಾ ವೈರಸ್‌ಗೆ ನೀಡುವ ನೇಸಲ್ ಡ್ರಾಪ್ಸ್‌ನ ಅನುಕೂಲಕರ ಅಂಶವೆಂದರೆ ಈ ವೈರಸ್ ಸಾಮಾನ್ಯವಾಗಿ ಮೂಗಿನ ಮೂಲಕ ಪ್ರವೇಶ ಪಡೆದು ಶ್ವಾಸಕೋಶ ತಲುಪಿ ತೊಂದರೆ ಕೊಡಲಾರಂಭಿಸುವುದು. ಈ ಡ್ರಾಪ್ಸ್ ಅನ್ನು ಮೂಗಿನ ಮೂಲಕವೇ ನೀಡುವುದರಿಂದ ವೈರಸ್ ಅಲ್ಲೇ ನಾಶಹೊಂದುವ ಕಾರಣ ಬೇರೆಯವರಿಗೆ ಸಾಂಕ್ರಾಮಿಕವಾಗಿ ಹರಡುವ ಅಪಾಯ ಇಲ್ಲ. ಜೊತೆಗೆ ಸೂಜಿ ಮೂಲಕ ತೋಳಿಗೆ ಚುಚ್ಚುವ ಅಗತ್ಯವಿಲ್ಲ. ನೋವು ರಹಿತ ಚಿಕಿತ್ಸೆ. ಔಷಧಿ ಮೂಗಿನ ಮೂಲಕ ನೇರವಾಗಿ ಶ್ವಾಸಕೋಶ ತಲುಪುತ್ತದೆ. ಬೇಗನೆ ವೈರಸ್ ನಾಶವಾಗಿ ರೋಗಿ ಬೇಗನೆ ಚೇತರಿಸಿಕೊಳ್ಳುವಂತಾಗುತ್ತದೆ' ಎಂದು ವಿವರ ನೀಡುತ್ತಾರೆ ಶಿವಮೊಗ್ಗದಲ್ಲಿ ಫಿಸೀಷಿಯನ್ ಆಗಿರುವ ಡಾ. ಶ್ರೀಕಾಂತ ಹೆಗಡೆ.



'ನೇಸಲ್ ಡ್ರಾಪ್ಸ್‌ನಲ್ಲಿ ಇರುವ ಅಂಶಗಳು ಸದ್ಯ ಲಭ್ಯವಿರುವ ವ್ಯಾಕ್ಸಿನ್‌ನಲ್ಲಿ ಇರುವಂಥದ್ದೇ. ಕೊರೊನಾ ವೈರಸ್ ನಿರ್ಮೂಲನೆಗೆ ಸದ್ಯ ಬಳಸುತ್ತಿರುವ ವ್ಯಾಕ್ಸಿನ್‌ನಲ್ಲಿ ಇರುವ ಚಿಂಪಾಂಜಿ ವೈರಸ್ ಅನ್ನು ರೂಪಾಂತರಗೊಳಿಸಿ ವೈರಸ್‌ನ ಸೋಂಕುಕಾರಕ ಪ್ರೊಟೀನ್‌ನ ಜೀನ್ಸ್ ಅನ್ನು ಇದರೊಳಗೆ ಸೇರಿಸಿ ಡ್ರಾಪ್ಸ್ ತಯಾರಿಸಲಾಗುತ್ತದೆ. ಇದೇ ತಂತ್ರಜ್ಞಾನವನ್ನು ಕೋವಿಶೀಲ್ಡ್‌ನಲ್ಲೂ ಬಳಸಲಾಗಿದೆ' ಎನ್ನುತ್ತಾರೆ ಡಾ. ಶ್ರೀಕಾಂತ್.

### ಪ್ರಯೋಜನ

- ನೋವು ರಹಿತವಾಗಿರುತ್ತದೆ
- ಬೇಗನೆ ಚೇತರಿಸಿಕೊಳ್ಳಬಹುದು
- ವೈರಸ್‌ನಿಂದ ಹೆಚ್ಚಿನ ಸಂರಕ್ಷಣೆ ಒದಗಿಸುತ್ತದೆ.
- ಸಿಂಗಲ್ ಡೋಸ್ ಸಾಕಾಗುತ್ತದೆ.
- ರೋಗನಿರೋಧಕ ಶಕ್ತಿ ವೃದ್ಧಿಸುತ್ತದೆ.
- ಅತ್ಯಂತ ಕಡಿಮೆ ಪ್ರಮಾಣ, ಎಂದರೆ ಕೇವಲ 0.1 ಎಂಎಲ್ ಔಷಧಿ ಸಾಕಾಗುತ್ತದೆ.

ಮೂಗಿನ ಮೂಲಕ ಇನ್‌ಹೇಲ್ ಮಾಡುವ ಈ ಡ್ರಾಪ್ಸ್ ಅನ್ನು ಭಾರತದ ಬಯೊಟೆಕ್ ಕಂಪೆನಿ ಹಾಗೂ ಅಮೆರಿಕದ ವಾಷಿಂಗ್ಟನ್‌ನಲ್ಲಿರುವ ಸೈಂಟ್ ಲೂಯಿಸ್ ವಿಶ್ವವಿದ್ಯಾಲಯದ ವೈದ್ಯವಿಜ್ಞಾನಿಗಳ ಸಹಯೋಗದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

ಒಂದು ಕಾಲದಲ್ಲಿ ಪೋಲಿಯೊ ಕಾಯಿಲೆಗೂ ಚುಚ್ಚುಮದ್ದೇ ಬಳಕೆಯಲ್ಲಿತ್ತು. ಕ್ರಮೇಣ ಬಾಯಿಗೆ ಎರಡು ಹನಿ ಹಾಕುವ ಮೂಲಕ ಪೋಲಿಯೊವನ್ನು ಸಂಪೂರ್ಣ ನಿರ್ನಾಮ ಮಾಡಬಹುದು ಎಂಬುದನ್ನು ವೈದ್ಯವಿಜ್ಞಾನಿಗಳು ಸಾಬೀತುಪಡಿಸಿದ ಪರಿಣಾಮ ಇಂದು ಪೋಲಿಯೊ ಹನಿ ಎಲ್ಲ ಮಕ್ಕಳನ್ನು ಕಾಪಾಡುತ್ತಿವೆ. ಅಲ್ಲದೆ ಇನ್‌ಫ್ಲ್ಯುಯೆಂಜಾಕ್ಕೂ ನೇಸಲ್ ಡ್ರಾಪ್ಸ್ ನೀಡಲಾಗುತ್ತಿದ್ದು, ಇದೂ ಹೆಚ್ಚು ಪರಿಣಾಮಕಾರಿ ಎನಿಸಿಕೊಂಡಿದೆ. ಇದೇ ರೀತಿ ಕೋವಿಡ್ 19 ಲಸಿಕೆ ಬದಲಿಗೆ ನೇಸಲ್ ಡ್ರಾಪ್ಸ್ ಬಂದರೆ ಚುಚ್ಚಿಸಿಕೊಂಡು ನೋವು ಅನುಭವಿಸುವ ಕಷ್ಟದಿಂದ ಪಾರಾದಂತಾಗುತ್ತದೆ.